ಶ್ರೀ ರೋಷನ್ ಬೇಗ್ (ಗೃಹ ಸಚಿವರು):- ಮಾನ್ಯ ಅಧ್ಯಕ್ಷರೆ, ಬ್ರಿಗೇಡ್ ರಸ್ತೆಯಲ್ಲಿ ಜನರಿಗೆ ತೊಂದರೆಯಾಗುತ್ತದೆಂದು ನಾವು ವಾಹನ ನಿಲುಗಡೆಯನ್ನು ಬ್ಯಾನ್ ಮಾಡಿದ್ದೆವು. ಅಲ್ಲಿಯ ಅಂಗಡಿಯವರಿಗೆ ಹಾಗು ಜನರಿಗೆ ತೊಂದರೆಯಾಗುತ್ತದೆ ಎಂದು ನಾವು ಈ ಕ್ರಮವನ್ನು ಕೈಗೊಂಡಿದ್ದೆವು. ಈ ಬಗ್ಗೆ ಕೆಲವರು ನಮಗೆ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ಎಂದು ಸಹ ಪತ್ರ ಬರೆದಿದ್ದರು. ಮತ್ತೊಂದು ಕಡೆ ಷಾಪ್ ಕೀಪರ್ಸ್ ನಮಗೆ ಇದರಿಂದ ತೊಂದರೆಯಾಗುತ್ತಿದೆ, ಯಾರು ಷಾಪ್‌ಗೆ ಬರುತ್ತಾರೆ ಅವರಿಗೆ ತೊಂದರೆ ಆಗುತ್ತದೆ. ಆದ್ದರಿಂದ ಎನಾದರೂ ಅಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಮಾಡಿ ಎಂದು ಮನವಿ ಮಾಡಿದರು. ಆಲ್ಟರ್‌ನೇಟಿವ್ ಅರೇಂಜ್‌ಮೆಂಟಿಗೆ ನಾವು ಒಪ್ಪುತ್ತೇವೆಂದು ಹೇಳಿ ಅದಕ್ಕೆ ಸ್ವಲ್ಪ ಬದಲಾವಣೆ ಮಾಡಿದ್ದೇವೆ.

ಇ. **ಬಾಗೇಪಲ್ಲಿ ತಾಲ್ಲೂಕಿನಲ್ಲಿ ನಡೆದ ದರೋಡೆ ಪ್ರಕರಣ.**

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಇತ್ತೀಚೆಗೆ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿವೆ. ಕಳೆದ 3ನೇ ತಾರೀಖು ವೈದ್ಯರೊಬ್ಬರ ಮನೆಯಲ್ಲಿ ದರೋಡೆ ಆಯಿತು. ಸುಮಾರು 3-4 ಲಕ್ಷ ರೂಪಾಯಿಗಳ ಆಸ್ತಿಯನ್ನು ದೋಚಿಕೊಂಡು ಹೋದರು. 10ನೇ ತಾರೀಖು ರಾತ್ರಿ 9ಗಂಟೆ ಸಮಯದಲ್ಲಿ ವ್ಯಾಪಾರ ಆದಮೇಲೆ ಅಂಗಡಿ ಬಾಗಿಲು ಹಾಕಿಕೊಂಡು ಹೋಗುತ್ತಿದ್ದ ತಂದೆ ಮತ್ತು ಮಗಳ ಮೇಲೆ ಹಲ್ಲೆ ಮಾಡಿ, ಬಾಂಬ್ ಹಾಕಿ ಅವರನ್ನು ತಿವಿದು ದರೋಡೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಘಟನೆಗಳು ನನ್ನ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿವೆ. 6 ತಿಂಗಳಿಂದ ನಾನು ಮಾನ್ಯ ಗೃಹ ಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಇಡೀ ಪೋಲೀಸ್ ಸಿಬ್ಬಂದಿಯನ್ನು ಅಲ್ಲಿಂದ ಬದಲಾವಣೆ ಮಾಡಬೇಕು.

ಅಧ್ಯಕ್ಷರು:- ಎಲ್ಲಾ ಕ್ಷೇತ್ರಗಳಲ್ಲಿ ಮಾಡಿಸಬೇಕೆಂದು ಹೇಳುತ್ತೀರೋ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ದರೋಡೆ ವಿಕೇಂದ್ರೀಕರಣದ ಬಗ್ಗೆ ನಾನು ಹೇಳುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿವೆ. ಅದಕ್ಕೆ ಒಂದು ಕಾರಣ ಇದೆ. ಅದು ಆಂಧ್ರದ ಗಡಿಗೆ ಹೊಂದಿಕೊಂಡಿರತಕ್ಕ ತಾಲ್ಲೂಕು. ಆಂಧ್ರದಲ್ಲಿ ಆರ್ಯಾಕ್ ಬ್ಯಾನ್ ಆಗಿರುವುದರಿಂದ ಎಲ್ಲಾ ಜನರು ಇಲ್ಲಿಗೆ ಬರುತ್ತಾರೆ. ಹೀಗಾಗಿ ಅಲ್ಲಿ ಕಾನೂನು ವ್ಯವಸ್ಥೆ ಬಹಳ ಹದಗೆಡುತ್ತಿದೆ.

12.40 ಪಿಎಂ.

ಆಂಧ್ರದಲ್ಲಿ ಆರ್ಯಾಕ್ ಬ್ಯಾನ್ ಆಗಿರುವುದರಿಂದ ಎಲ್ಲಾ ಜನರು ಅಲ್ಲಿಗೆ ಬರುತ್ತಾರೆ. ಮತ್ತೆ ನಕ್ಸಲೈಟ್ಸ್ ತಾಲ್ಲೂಕು ಅದು. ಹೀಗಾಗಿ ಕಾನೂನು ವ್ಯವಸ್ಥೆ ಭಾರೀ ಹದಗೆಡುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ತಾಲ್ಲೂಕಿನ ಪರಿಚಯ ನಮಗೆ ಆಗಲಿಲ್ಲ.

ಅಧ್ಯಕ್ಷರು:- ನಮ್ಮಲ್ಲಿ ಡಕಾಯಿತಿ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹಿಂದೆ ಅವರಲ್ಲೂ ಆಗಿದೆ. ಆದ್ದರಿಂದ ನಾನು ಬಹಳ ಗಂಭೀರವಾಗಿ ಆರು ತಿಂಗಳಿಂದ ಗೃಹ ಖಾತೆಯ ಮಂತ್ರಿಯವರಲ್ಲಿ ಕೇಳಿದ್ದೇನೆ. ಮತ್ತು ಡಿಜಿಪಿ ಯವರಲ್ಲೂ ಕೇಳಿದ್ದೇನೆ. ಇಡೀ ಪೋಲೀಸ್ ಸಿಬ್ಬಂದಿ ಅಲ್ಲಿರುವವರನ್ನು ಬದಲಾವಣೆ ಮಾಡಬೇಕು ಎಂದು ಹೇಳಿದರೂ ಇದುವರೆಗೂ ನಾನು ಲಿಖಿತ ಮೂಲಕವಾಗಿ ಕೊಟ್ಟರೂ ಸಹಿತ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು:- ಆಯಿತು, ಬಹಳ ಹೊತ್ತು ಹೇಳುವ ಹಾಗೆ ಇಲ್ಲ. ಸೀನಿಯರ್ ಮೆಂಬರ್ ಫ್ರಂಟ್ ಬೆಂಚ್‌ಗೆ ಬಂದಿದ್ದೀರಿ. ಫ್ರಂಟ್ ಬೆಂಚ್‌ನಲ್ಲಿರುವವರು ಹಿಂದೆ ಇರುವವರಿಗೆ ಮಾರ್ಗದರ್ಶಕರು. ನೋಡಿ, ಸುರೇಶ್‌ಕುಮಾರ್ ಎಷ್ಟೊಂದು ಚೆನ್ನಾಗಿ ಮಾತನಾಡಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ಹೇಳುತ್ತಿರುವುದು ನಿರಂತರವಾಗಿ ನಡೆಯುತ್ತಿದ್ದರೂ ಪೋಲೀಸ್ ಇಲಾಖೆ ಏನೂ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಇದರ ಬಗ್ಗೆ ಏನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೆ ಎಂದು ಹೇಳಬೇಕು. ಮತ್ತು ಇಡೀ ಪೋಲೀಸ್ ಸಿಬ್ಬಂದಿಯನ್ನು ಬದಲಾವಣೆ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ (ರಾಜ್ಯ ಗೃಹ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀರಾಮ ರೆಡ್ಡಿಯವರು ನನಗೆ ಮೊದಲೇ ಹೇಳಿದರು, ಅಲ್ಲಿ ಪೋಲೀಸ್ ಸಿಬ್ಬಂದಿಗಳನ್ನು ಬದಲಾವಣೆ ಮಾಡಬೇಕು, ಕಾನ್ಸ್‌ಟೇಬಲ್, ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ಹೆಡ್ ಕಾನ್ಸ್‌ಟೇಬಲ್ ಅವರಿಗೆಲ್ಲಾ ವರ್ಗ ಮಾಡಬೇಕು ಎಂದು ಹೇಳಿದರು. ಅದೇನಾಯಿತು ಎಂದರೆ ಅವರಿಗೆಲ್ಲಾ ಈಗ ಮಿಡ್ಲ್ ಆಫ್ ದಿ ಅಕಾಡೆಮಿಕ್ ಇಯರ್ ಮಾಡುವುದು ಬೇಡ, ಜನರಲ್ ಟ್ರಾನ್ಸ್‌ಫರ್‌ನಲ್ಲಿ ಅವರಿಗೆಲ್ಲಾ ವರ್ಗ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದೇ ರೀತಿ ಮಾಡುತ್ತೇವೆ ಎಂದು ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಆರೋಗ್ಯ ಮಂತ್ರಿಗಳವರ ಗಮನಕ್ಕೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವ ವಿಷಯವನ್ನು ತರುತ್ತಿದ್ದೇನೆ.

ಅಧ್ಯಕ್ಷರು:- ನೀವು ಹೇಳಿ. ಅದನ್ನು ಅವರಿಗೆ ನಾನು ತಿಳಿಸುತ್ತೇನೆ.

ಈ. ಚಿಕ್ಕಮಗಳೂರು ಜಿಲ್ಲೆ ವೈದ್ಯಾಧಿಕಾರಿಗಳ ನೇಮಕ.

+ ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಸಾರ್ವಜನಿಕ ಆಸ್ಪತ್ರೆ ಇದೆ. ಎರಡು ವರ್ಷಗಳಿಂದ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ನಮ್ಮಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ ಮಾನ್ಯ ಮಂತ್ರಿಗಳೇ ನನ್ನ ಕ್ಷೇತ್ರಕ್ಕೆ ಬಂದು ವಾಗ್ದಾನ ಮಾಡಿ 15 ದಿವಸದಲ್ಲಿಯೇ ಜಿಲ್ಲಾ ವೈದ್ಯಾಧಿಕಾರಿಗಳನ್ನು ನೇಮಿಸುತ್ತೇನೆ ಎಂದು ಹೇಳಿದ್ದರು ಇಲ್ಲಿಯವರೆಗೂ ನೇಮಿಸಿಲ್ಲ. ಎರಡನೆಯದು ನಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಕೂಡು ಇಲ್ಲ. ಅವರನ್ನು ಕೂಡ ನೇಮಿಸಿಲ್ಲ. ಇದರ ಬಗ್ಗೆ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.